ದಿ: 16-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಎಂ.ಕೆ. ವಕೀಲರಿಂದ :**

11. KPTCL ವಿಚಾರಣೆ ಕಾಲಕ್ಕೆ ಯಾರದು ಸಾಕ್ಷಿ ಆಗಿದೆ ಅಂತ ನನಗೆ ಗೊತ್ತಿಲ್ಲ. Executive Engineer ಷಣ್ಮುಖಪ್ಪರವರು ಚನ್ನಗಿರಿ ತಾಲ್ಲೂಕು ಬೆಂಕಿಕೆರೆಯಲ್ಲಿದ್ದಾರೆ ಅಂದರೆ ನಿಜ. ಅವರದ್ದು ವಿಚಾರಣೆ ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. KPTCL ನ AEO ರವರಿಗೆ contract ಕೆಲಸವನ್ನು ನಿಯಂತ್ರಿಸಲು ಅಧಿಕಾರಿ ಇರುತ್ತದೆ ಅಂದರೆ ನಮ್ಮ employees ನ ನಿಯಂತ್ರಿಸುವ ಅಧಿಕಾರ ಇರುತ್ತದೆ. ತ್ಯಾವಣಗಿ sub station ಯಾರು ಯಾರು ಕೆಲಸ ಮಾಡುತ್ತಾರೆ ಅಂತ ಹಾಜರಾತಿ ಪುಸ್ತಕವನ್ನು ಇಟ್ಟುಕೊಳ್ಳುತ್ತಾರೆ ಅಂದರೆ ನಾವೇ ಹಾಜರಾತಿ ಪುಸ್ತಕ ಇಟ್ಟುಕೊಳ್ಳುತ್ತೇವೆ. ದಿಃ 01-03-2018 ರಿಂದ ನಾವು ಈ contract ನ್ನು ಪಡೆದುಕೊಂಡಿದ್ದೇವೆ. ದಿಃ 01-03-2018 ರಿಂದ 19-03-2018 ರವರೆಗೆ ನಾವು maintain ಮಾಡಿರುವ ಹಾಜರಾತಿ ಪುಸ್ತಕವನ್ನು ಹಾಜರುಪಡಿಸಿಲ್ಲ. ಹಾಜರುಪಡಿಸಲು ನಮಗೆ ತೊಂದರೆ ಇಲ್ಲ. ಆ ಹಾಜರಾತಿ ಪುಸ್ತಕವನ್ನು ಅವತ್ತೆ KPTCL ಇಲಾಖೆಯವರಿಗೆ ಕೊಟ್ಟಿರುತ್ತೇವೆ. ಆ ಹಾಜರಾತಿ ಪುಸ್ತಕ ನಮ್ಮ ಬಳಿ ಇರುತ್ತದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅರ್ಜಿದಾರರು Trade Union Leader ಆಗಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ.

12. ಈ ಪ್ರಕರಣದಲ್ಲಿ ಅನಾನುಕೂಲವಾಗುತ್ತದೆ ಅಂತ ಅರ್ಜಿದಾರರ ವಿರುದ್ಧ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಅರ್ಜಿದಾರರು ಎಷ್ಟು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ ಅಂತ ನನಗೆ ಗೊತ್ತಿಲ್ಲ. ಸತತವಾಗಿ 19 ವರ್ಷಗಳಷ್ಟು ಅರ್ಜಿದಾರರು ಕೆಲಸ

ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಅರ್ಜಿದಾರರಿಗೆ ಖಾಯಂ ಕೆಲಸವನ್ನು ಮಾಡುವುದು ಕೇಳುವುದು ಹಕ್ಕು ಇರುತ್ತದೆ ಮತ್ತು ನಾವು ಖಾಯಂಗೊಳಿಸುವುದು ನಮ್ಮ ಕರ್ತವ್ಯ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಈಗ ಅರ್ಜಿದಾರರು ಏನು ಕೆಲಸ ಮಾಡುತ್ತಾರೆ ಅಂತ ನನಗೆ ಗೊತ್ತಿಲ್ಲ. ಯಾವುದೇ ವರಮಾನ ಇಲ್ಲದೇ ಅರ್ಜಿದಾರರು ನಿರುದ್ಯೋಗಿಯಾಗಿರುತ್ತಾರೆ ಅಂದರೆ ಅವರು ನನ್ನ ಹತ್ತಿರ ಕೆಲಸ ಮಾಡಿಲ್ಲ. ಅರ್ಜಿದಾರರು ನಿರಂತರವಾಗಿ ಕೆಲಸ ಮಾಡಿದ್ದರೂ ಸಹ ಇಲಾಖೆಯವರ ಜೊತೆ ಸೇರಿ ಸುಳ್ಳು ಸಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಅನೇಕ ವಿಷಯಗಳನ್ನು ಸುಳ್ಳಾಗಿ ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ನಾನು ಮತ್ತು ಎದುರುದಾರರ –1 ಸೇರಿ ಅರ್ಜಿದಾರರಿಗೆ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಕೊಡಲು ಭಾಗಸ್ತವಾಗಿರುತ್ತೇವೆ ಅಂದರೆ ಸರಿಯಲ್ಲ. ಅರ್ಜಿದಾರರು trade union leader ಆಗಿರುವುದರಿಂದ ಅವರಿಗೆ ತೊಂದರೆ ಕೊಡಲು ಈ ರೀತಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ.